ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5, Special Issue-1, Sep-Oct, 2023, Pp. 85-88.
©IIMRD, Mysuru.

IIMRD JOURNALS

www.iimrd.com

# ಕೋಲಾರ ಜಿಲ್ಲೆಯ ಶಾಸನೋಕ್ತ ಮಹಿಳೆಯರು

**ಡಾ. ಶಿಲ್ಪ ಎಸ್.***

*ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು.

***ಸಾರಾಂಶ: (Abstract)***

*ಪ್ರಾಚೀನ ಕಾಲದ ಮಹಿಳೆಯರ ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಸ್ಥಿತಿಗತಿ, ತಿಳಿಯಲು ಶಾಸನಗಳು ಹೆಚ್ಚಿನ ಆಧಾರವನ್ನು ಒದಗಿಸುತ್ತವೆ. ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಇವರ ಸಂಖ್ಯೆ ವಿರಳವಾಗಿದ್ದರೂ, ದಾನ ನೀಡುವ ವಿಷಯದಲ್ಲಿ ಸ್ವಾತಂತ್ರ್ಯವಿತ್ತು ಎಂಬುದು ಶಾಸನಗಳ ಮೂಲಕ ತಿಳಿಯುತ್ತದೆ. ಅನ್ನದಾಸೋಹ, ಅರವಟ್ಟಿಗೆ, ದೇವಸ್ಥಾನಗಳ ಜೀರ್ಣೋದ್ಧಾರ ಮುಂತಾದ ಕೆಲಸಗಳಲ್ಲಿ ಮಹಿಳೆಯರ ಪಾಲ್ಗೊಂಡಿರುವ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಪ್ರಸ್ತುತ ಲೇಖನವು ಕೋಲಾರ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಮಹಿಳೆಯರ ಸ್ಥಾನಮಾನವನ್ನು ವಿಶ್ಲೇಷಿಸುತ್ತದೆ.*

***ಮುಖ್ಯಪದಗಳು (Keywords)*** *ಕೋಲಾರ ಜಿಲ್ಲೆ, ಶಾಸನಗಳ, ಅನ್ನ ದಾಸೋಹ, ದುಗ್ಗಬ್ಬೆ, ಅಮರ ನದಿ.*

**ಪೀಠಿಕೆ**

ಪ್ರಾಚೀನ ಕಾಲದ ಮಹಿಳೆಯರ ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಸ್ಥಿತಿಗತಿ, ತಿಳಿಯಲು ಶಾಸನಗಳು ಹೆಚ್ಚಿನ ಆಧಾರವನ್ನು ಒದಗಿಸುತ್ತವೆ. ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಇವರ ಸಂಖ್ಯೆ ವಿರಳವಾಗಿದ್ದರೂ, ದಾನ ನೀಡುವ ವಿಷಯದಲ್ಲಿ ಸ್ವಾತಂತ್ರ್ಯವಿತ್ತು ಎಂಬುದು ಶಾಸನಗಳ ಮೂಲಕ ತಿಳಿಯುತ್ತದೆ. ಅನ್ನದಾಸೋಹ, ಅರವಟ್ಟಿಗೆ, ದೇವಸ್ಥಾನಗಳ ಜೀರ್ಣೋದ್ಧಾರ ಮುಂತಾದ ಕೆಲಸಗಳಲ್ಲಿ ಮಹಿಳೆಯರ ಪಾಲ್ಗೊಂಡಿರುವ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಉನ್ನತವರ್ಗದ ಮಹಿಳೆಯರಷ್ಟೆ ಅಲ್ಲದೆ ಸಮಾಜದಲ್ಲಿರುವ ಸಾಮಾನ್ಯ ವರ್ಗದ ಮಹಿಳೆಯರು ನೀಡಿದ ದಾನ ಮತ್ತು ಸಮಾಜಮುಖಿ ವಿಷಯವನ್ನು ದಾಖಲಿಸುತ್ತದೆ.

ಬಿ.ಎಲ್. ರೈಸ್ ಸಂಪಾದಿಸಿರುವ ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–10ರಲ್ಲಿ ಕೋಲಾರ ಜಿಲ್ಲೆಗೆ ಸಂಬಂಧಿಸಿದ ಸುಮಾರು ಸಾವಿರಕ್ಕೂ ಹೆಚ್ಚಿನ ಶಾಸನಗಳು ದೊರೆಯುತ್ತವೆ. ಈ ಶಾಸನ ಸಂಪುಟವನ್ನು ಆಧರಿಸಿ ಪ್ರಸ್ತುತ ಲೇಖನವು ಕೋಲಾರ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಮಹಿಳೆಯರ ಸ್ಥಾನಮಾನವನ್ನು ವಿಶ್ಲೇಷಿಸುತ್ತದೆ. ನಮ್ಮ ನೆಲದ ವಾಸ್ತವತೆಯನ್ನು ಅಧ್ಯಯನ ಮಾಡಲು ವಿಶ್ವಾಸರ್ಹ ಆಕರ ಶಾಸನವಾಗಿದೆ.

*Please cite this article as:* ಡಾ. ಶಿಲ್ಪ ಎಸ್. (2023). ಕೋಲಾರ ಜಿಲ್ಲೆಯ ಶಾಸನೋಕ್ತ ಮಹಿಳೆಯರು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.85–88.*

**ಕಂಚಿಅಬ್ಬೆ**

ಮುಳಬಾಗಿಲು ತಾಲ್ಲೂಕಿನಲ್ಲಿ ದೊರೆಯುವ ಕ್ರಿ.ಶ.767ರ ಶಾಸನವೊಂದರಲ್ಲಿ ಕಂಚಿಯಬ್ಬೆಯ ಉಲ್ಲೇಕವಿದೆ. ''ಗಂಗ ಶ್ರೀಪುರುಷ ಮಹಾರಾಜಧಿರಾಜ 42ನೇ ವರ್ಷ ಆದ ಸಂದರ್ಭದಲ್ಲಿ ದುಗ್ಗಮಾರೆಜೆಅಪ್ಪೋ ಕುವಳಾಲನಾಡು ಮೂನುಋಂ ಕಞ್ಚಅಬ್ಬೆ ಅಗಳಿ'' ಆಳುತ್ತಿರುವಂತೆ ಶಾಸನದ ಉಲ್ಲೇಖವಿದೆ. ಈಕೆ 4ನೇ ಶತಮಾನದ ಗಂಗರಸರು 'ಶ್ರೀ ಪುರುಷನ ಸೊಸೆ ದುಗ್ಗಮಾರನ ಹೆಂಡತಿ ಕಂಚಿಯಬ್ಬೆ' ಎಂಬ ಉಲ್ಲೇಖವಿದ್ದು, ಈಕೆ 'ಅಗಳಿ' ಎಂಬ ಪ್ರದೇಶವನ್ನು ಆಳುತ್ತಿದ್ದಳೆಂದು ತಿಳಿಯುತ್ತದೆ. ಆಡಳಿತ ಕ್ಷೇತ್ರದಲ್ಲಿ ಮಹಿಳೆಯರು ಪಾಲ್ಗೊಂಡಿರುವುದು ಕಂಡುಬರುತ್ತದೆ.[1]

**ದೀವಬ್ಬರಸಿ** ಕ್ರಿ.ಶ.830ರ ನೊಳಂಬರ ಕಾಲಕ್ಕೆ ಸೇರುವ ಕಂಬ ಶಾಸನವಾಗಿದೆ. ಕಂಬದ ನಾಲ್ಕೂ ಮುಖಗಳಲ್ಲಿ ಶಾಸನವನ್ನು ಕೆತ್ತಲಾಗಿದೆ. ಒಟ್ಟು 81 ಸಾಲಿನ ಶಾಸನ. ಈ ಶಾಸನ ನೊಳಂಬ ಪೊಳಲ್ಚೋರನ ಅರಸಿ ದೀವಬ್ಬರಸಿಯನ್ನು ಉಲ್ಲೇಖಿಸುತ್ತದೆ. ಇವಳು 'ದೀವಬ್ಬರಸಿಯು ದೀವಳಬ್ಬೆ ಸಮುದ್ರವನ್ನು ಕಟ್ಟಿಸಿ ಅಲ್ಲಿ ವಿಷ್ಣು ಮತ್ತು ನಾರಾಯಣ ಮೂರ್ತಿಯನು ಪ್ರತಿಷ್ಠಾಪಿಸಿದಳೆಂಬುದು ತಿಳಿದುಬರುತ್ತದೆ.

ದೀವಾಳಾಂಬಿಕೆ ನಿರ್ಮಿಸಿದ ದೀವಳಬ್ಬಾಸಮುದ್ರದ ವರ್ಣನೆಯನ್ನು ಅವನಿ ಶಾಸನ ಹೀಗೆ ನೀಡುತ್ತದೆ.

*"ವಿದಿತಂ ಲೋಕಕ್ಕೆ ಮುನ್ನಂ ರಘುಕುಳದಹನೋಗ್ರೇಷುವಿಂ ಕಾಯ್ದು ತಿಣ್ಣಂ*
*ಕುದಿಗೊಣ್ಡಳ್ಳಿತ್ತಗಸ್ತ್ಯಂ ಕುಡಿಯುತುಗುಳ್ದನಿಂ ಕಟ್ಟು ಪಟ್ಟಿ*
*ಳ್ದಿ ದಿನ್ತಪ್ಪದು ಪೆಂಪನ್ತಾಳ್ದಿ ತೆನ್ದನ್ದರಿಯರೆ ಲವಣಾಂಬೋಧಿಯಂ ...........*
*ಪಡೆದಾಯಸಕ್ಕೆ ಪಕ್ಕಾಗಿರೆ ಗಡ ಪಿರಿದುಂ ಭ್ರಾಂತಿನಿಂ ಪೋಪುದೊಂದ*
*ಬ್ದದೊಳಿಂತೆಂತಾನುಮೆಯ್ದುತ್ತಿರದಮರನದೀಕಾಂತೆಯಂ ಕಾಣ್ಬರೀ.....*
*.....ದೇಸರ ಸಯ್ಪುಂತಿದೇಂ ಸಂಭವಿಸಿತೊನಮಗಪ್ಪಳ್ಕರಿಂಗಂಗೆ ತೆಕ*
*ಣ್ಣೆದಿರಂ ಬಂದಿರ್ದುದೆಂಬಂತತಿ ಬಹಳಜಳಂ ದೀವಳಾಬ್ಬಾಸಮುದ್ರಂ॥*

ಎಂದು ವ್ಯಕ್ತಪಡಿಸಿದೆ. ಪೋರಮಂಗಲದಲ್ಲಿ ದೀವಳಬ್ಬೆ ಈ ದೀವಳಾಬ್ಬಾ ಸಮುದ್ರವನ್ನೂ ಮಹೆರನ್ನನಾಮದ ಕೊಳವನ್ನೂ ರಚಿಸಿದಂತೆ ಅದೇ ಶಾಸನ ತಿಳಿಸಿದೆ"[2]. "ಪೌರಾಣಿಕ ಉಪಮೆಗಳೊಂದಿಗೆ ಅಮರನದಿ ದಕ್ಷಿಣಕ್ಕೆ ಬಂದು ನೆಲಸಿತೆಂಬಂತೆ ಬರೆಯಲ್ಪಟ್ಟ ಈ ಸಮುದ್ರದ ಬಗೆಗೆ ಡಾ.ಎಂ.ಎಂ. ಕಲಬುರ್ಗಿಯವ ಪ್ರಕಾರ "ದೀವಾಂಕೆಯ ಕೊಳ ತಟಾಕ ಶಿವದೇವಾಲಯ ವಿಷ್ಣು ಗೃಹ ನಿರ್ಮಾಣ ಕಾರ್ಯಗಳನ್ನು ವಿವರಿಸುವ ಈ ಶಾಸನ ಅತ್ತಿಮಬ್ಬೆಯ ಮಹಾಕಾರ್ಯವನ್ನು ನೆನಪಿಗೆ ತರುತ್ತದೆ. ಇಲ್ಲಿಯ ತಟಾಕ ವರ್ಣನೆ ಮುಂದಣ ಕಾವ್ಯಗಳಲ್ಲಿಯ ತಟಾಕವರ್ಣನೆಗೆ ಮಾದರಿಯೆನಿಸಿದೆ." ಎಂದಿದ್ದಾರೆ.[3]

"ನೊಟಂಬ ನಾರಾಯಣ ಶ್ರೀವೀರ ಮಹೇಂದ್ರ ನೋಟಂಬಾಧಿರಾಜನ ಪರೋಕ್ಷದೊಳ್, ದೀವಬ್ಬರಸಿಯರ್ ಪೊಳಲ್ ಚೋರ ಮಂಗಲದೊಳ್ ದೀವಬ್ಬ ಸಮುದ್ರವಂ ಕಟ್ಟಿಸಿಯಲ್ಲಿಯೇ

ವಿಷ್ಣುಗ್ರಿಹಮಂ ಮಾಡಿಸಿಯಾವನ್ಯದೊಳ್ ನೊಟಂಬ ನಾರಾಯಣೇಶ್ವರಮಂ ಮಾಡಿಸಿ ಈ ದೇವರ್ಗ್ಗೆಳ ನಗರಮಂ ಸರ್ಬ್ಬಭಾಧಾ ಪರಿಹಾರಂ ಆಗಿ ಕೊಟ್ಟರ್'' ಎಂದಿದೆ.[4] ಈ ಶಾಸನವನ್ನು 'ಬರದನ್ನಾಮಯ್ಯ'(ಅನ್ನಮಯ್ಯ) ಎಂಬ ಲಿಪಿಕಾರ ಬರೆದಿರುವಾಗಿ ತಿಳಿದುಬರುತ್ತದೆ. ಇಡೀ ಶಾಸನವು ದೀವಬ್ಬರಸಿಯ ವ್ಯಕ್ತಿತ್ವ, ಗುಣ ಮತ್ತು ಅವಳ ಧರ್ಮ ಕಾರ್ಯವನ್ನು ವರ್ಣಿಸುತ್ತದೆ.

**ಸವಿನಿರ್ಮದಿ**

ಕೋಲಾರದ ಸಮೀಪವಿರುವ ಮಾರ್ಗಲ್ ಎಂಬ ಗ್ರಾಮದಲ್ಲಿ 10ನೇ ಶತಮಾನಕ್ಕೆ ಸೇರಬಹುದಾದ ಈ ಶಾಸನದಲ್ಲಿ ಸವಿನಿರ್ಮದಿ ಭೋಧನೆ ಮಾಡುತ್ತಿರುವ ಭಂಗಿಯಲ್ಲಿರುವಂತೆ ಚಿತ್ರಿಸಲಾಗಿದೆ. ಎಡಗೈಯಲ್ಲಿ ತಾಳೆಗರಿಯನ್ನು ಹಿಡಿದುನಿಂತಿರುವಂತೆ ಶಿಲ್ಪವನ್ನು ಕೆತ್ತಲಾಗಿದೆ. ಈ ಶಿಲ್ಪದ ಮೇಲಿರುವ ಬರಹವು ಅವಳ ತಂದೆ–ತಾಯಿ ಹೆಸರನ್ನು ಉಲ್ಲೇಖಿಸುತ್ತದೆ ಮತ್ತು ಸವಿನಿರ್ಮದಿ ಎಲ್ಲಾ ಶಾಸ್ತ್ರಗಳಲ್ಲಿ ಪರಿಣಿತಲಾಗಿದ್ದಳು ಎಂಬುದನ್ನು ತಿಳಿಸುತ್ತದೆ. ಈ ಶಾಸನವನ್ನು ಪ್ರಸ್ತುತ ಬೆಂಗಳೂರು ಪುರಾತತ್ವ ವಸ್ತು ಸಂಗ್ರಹಾಲಯಲ್ಲಿ ಸಂರಕ್ಷಿಸಿಡಲಾಗಿದೆ.[5]

**ದುಗ್ಗಬ್ಬೆ**

ಮೆಲಕೆರಿ ಒಡತಿ ದುಗ್ಗಬ್ಬೆ ತುಂಬೊಂದನ್ನು ಮಾಡಿಸಿರುವಳೆಂದು ಅವನಿ ಶಾಸನ ತಿಳಿಸುತ್ತದೆ.[6] ಜನರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು, ಕುಡಿಯುವ ನೀರಿನ ವ್ಯವಸ್ಥೆ, ಒಡೆದ ಕೆರೆಯ ದುರಸ್ತಿ, ತೂಬು ನಿರ್ಮಾಣ ಮೊದಲಾದ ಸಮಾಜಮುಖಿ ಕಾರ್ಯಗಳಲ್ಲಿ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡಿರುವ ನಿದರ್ಶನಗಳು ನಮಗೆ ಶಾಸನಗಳು ನೀಡುತ್ತವೆ. ತೂಬು ನಿರ್ಮಾಣ ಕಾರ್ಯ ಮಾಡುವುದರ ಮೂಲಕ ದುಗ್ಗಬ್ಬೆ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿದ್ದಳೆಂಬುದು ಸ್ಪಷ್ಟ.

**ಕಂತಿ**

ಪ್ರಾಚೀನ ಸಂಧರ್ಭದಲ್ಲಿ ಜೈನ ಸನ್ಯಾಸಿನಿಯರನ್ನು ಕಂತಿ/ಅಜ್ಜಿ ಎಂಬ ವಿಶೇಷಣಗಳಿಂದ ಗುರುತಿಸಲಾಗುತ್ತಿತ್ತು. ಕೋಲಾರ ಜಿಲ್ಲೆಯ ಕ್ರಿ..ಶ.903 ಶಾಸನದಲ್ಲಿ ಇಂತಹ ಕನ್ತಿಯ ಉಲ್ಲೇಖವಿದೆ. ಸನ್ಯಾಸಿಗಳಿಂದ ಸನ್ಯಾಸನ ದೀಕ್ಷೆ ಪಡೆದವಿವರವಿದೆ. "ಉತ್ತನಿನ್ದಿ ಪುರಿಮಣ್ಡಲಭಟಾರರ ಶಿಷ್ಯನ್ತಿಯರ್ಕ್ಕಮುಂಗರೆ ಕನ್ತಿ"[7] ಎಂದು ಸಾಲೂರು ತಾಮ್ರಪಟದ ಶಾಸನದಲ್ಲಿ ಉಕ್ತವಾಗಿದೆ.

**ಜೈತಾಬಾಯಿ**

ಶಿವಾಜಿಯ ಸೊಸೆ ಜಯತಾಬಾಯಿಯ ಉಲ್ಲೇಖ ಜಿಲ್ಲೆಯ ಶಾಸನದಲ್ಲಿ ದೊರೆಯುತ್ತವೆ. ಕ್ರಿ.ಶ.1666 ಕಾಲಘಟ್ಟದ ಈ ಶಾಸನವು ಈಕೆ ನೀಡಿದ ದಾನದ ವಿವರಗಳನ್ನು ಶಾಸನ ಉಲ್ಲೇಖಿಸುತ್ತದೆ. ಶಿವಾಜಿಯ ಮಗನಾದ ಸಂಭಾಜಿಯ ಹೆಂಡತಿಯಾದ ಜಯಿತಾಬಾಯಿ ಕಾಶ್ಯಪಗೋತ್ರದ 'ಕಪಥಳಿ' ಗೋವಿಂದಪಂತನ ವಿರೂಪಾಕ್ಷ ಶಂಕರನ ಮಗನಾದ ಭಾವುಜಿ ಪಂತನಿಗೆ ಕೊಟ್ಟಿರುವ ಭೂ ದಾನದ ಬಗ್ಗೆ ತಿಳಿಯುತ್ತದೆ.[8]

ಕೋಲಾರ ತಾಲೂಕಿನ ಕ್ರಿ.ಶ.1670ರ ಆಣ್ಣೇನಹಳ್ಳಿ ಗ್ರಾಮದ ಶಾಸನದಲ್ಲಿ9(ಅದೇ ಆಣ್ಣೇನಹಳ್ಳಿ, ಶಾ.ಸಂ. 224) ಜಯಿತಾಬಾಯಿಯ ಆಜ್ಞೆಯ ಅನುಸಾರ ಸುಗುಟೂರು ಪಾಳೆಗಾರರ ರಕ್ಷಣಾಧಿಕಾರಿಯಾದ

ಶ್ರೀವಿಠಲ ಪಂಡಿತ ಮತ್ತು ಅಗ್ರಹಾರದ ಜನಗಳು ಆಂಣೇನಳಳಿಯ ಶಂಕರನಿಗೆ ನೆತ್ತರಕೊಡುಗೆಯಾಗಿ ನೀಡಿದ ಹೊಲದ ದಾನದ ವಿವರವನ್ನು ತಿಳಿಸುತ್ತದೆ. ನೆರನಹಳ್ಳಿಯಲ್ಲಿ ದೊರೆಯುವ ಮತ್ತೊಂದು ಶಾಸನ ಜಯಿತಾಬಾಯಿ ಮರಣಹೊಂದಿದ ವಿಷಯ ತಿಳಿಸುತ್ತದೆ. ಕ್ರಿ.ಶ.1673ರಲ್ಲಿ ರಾಜಶ್ರೀ ಜಯಿತಾಬಾಯಿ ಅಮ್ಮನವರು ಕೈಲಾಸವಾಸಿಯಾಧರು ಎಂಬುದಾಗಿ ಸ್ಪಷ್ಟಪಡಿಸುತ್ತದೆ.[10] ಈ ಶಾಸನದ ಮೂಲಕ ಮರಾಠರ ಆಳ್ವಿಕೆಗೆ ಕೋಲಾರ ಒಳಗಾಗಿತ್ತು ಹಾಗೂ ಶಿವಾಜಿಯ ಸೊಸೆ ಜಯಿತಬಾಯಿ ಈ ಪ್ರದೇಶದಲ್ಲಿ ಆಡಳಿತ ನಡೆಸಿದಳೆಂಬುದು ವೇದ್ಯವಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಸ್ತ್ರೀವಾಚಿಕ ಕೆರೆಗಳು ಮತ್ತು ಊರುಗಳ ಹೆಸರುಗಳನ್ನು ಕಾಣಬಹುದು. ತಮ್ಮ ಮನೆಯ ಹೆಣ್ಣು ಮಕ್ಕಳ ಹೆಸರುಗಳನ್ನು ಕೆರೆ ಮತ್ತು ಊರುಗಳಿಗೆ ನೀಡಲಾಗುತ್ತಿದ್ದ ಉದಾಹರಣೆಗಳಿವೆ. ಹೀಗೆ ಶಾಸನಗಳು ಪ್ರಾಚೀನ ಕಾಲದ ಉನ್ನತ ವರ್ಗದ ಮತ್ತು ಸಾಮಾನ್ಯ ವರ್ಗದ ಮಹಿಳೆಯರ ಬದುಕು–ಬವಣೆ ಹಾಗೂ ಆಕೆ ದಾನವಂತಳಾಗಿ, ಆಡಳಿತಗಾರ್ತಿಯಾಗಿ, ಸನ್ಯಾಸಿನಿಯಾಗಿ, ಬೋಧಕಿಯಾಗಿ ಮೊದಲಾದ ಕ್ಷೇತ್ರಗಳಲ್ಲಿನ ಸ್ತ್ರೀ ಅಸ್ತಿತ್ವವನ್ನು ಚಿತ್ರಿಸುತ್ತವೆ. ನಾಡಿನ ಪ್ರಗತಿಯಲ್ಲಿ ಮಹಿಳೆಯರ ಕೊಡುಗೆ ಮತ್ತು ಅವರ ಭಾಗವಹಿಸುವಿಕೆಯ ಕುರಿತು ಚಿಂತನೆ ಅಗತ್ಯವಿದೆ. ಮಾನವ ಸಂಪನ್ಮೂಲದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಬಹು ದೊಡ್ಡದು.

**ಅಡಿಟಿಪ್ಪಣಿಗಳು**

1. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ 10, ಮುಳಬಾಗಿಲು, ಶಾ.ಸಂ, 80
2. ಎ.ಕ ಮುಳಬಾಗಿಲು 38 ಅವನಿ ಕ್ರಿ.ಶ 890
3. ಚೆನ್ನಕ್ಕ ಎಲಿಗಾರ–ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಪು.ಸ.2
4. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ 10, ಮುಳಬಾಗಿಲು, ಶಾ.ಸಂ, 38
5. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ 10, ಮುಳಬಾಗಿಲು, ಶಾ.ಸಂ, 80
6. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ 10, ಮುಳಬಾಗಿಲು, ಅವನಿ ಶಾ.ಸಂ, 308
7. ಎ.ಕ. ಕೋಲಾರ, 90 ಸೂಲೂರುತಾಮ್ರಪಟ
8. ಅದೇ : ಹುತ್ತೂರು, ಶಾ.ಸಂ.227
9. ಅದೇ ಆಣ್ಣೇನಹಳ್ಳಿ, ಶಾ.ಸಂ. 224
10. ಅದೇ; ನೆರನಹಳ್ಳಿ, ಶಾ.ಸಂ. 254

**ಪರಾಮರ್ಶನ ಗ್ರಂಥಗಳು**

- ರೈಸ್. ಬಿ.ಎಲ್. (1905). ಎಪಿಗ್ರಾಫಿಯಾ ಕರ್ನಾಟಿಕ. ಮೈಸೂರು ಸರ್ಕಾರ ಸೆಂಟ್ರಲ್ ಪ್ರೆಸ್, ಮೈಸೂರು.
- ಚೆನ್ನಕ್ಕ ಎಲಿಗಾರ. (1990). ಶಾಸನಗಳಲ್ಲಿ ಕರ್ನಾಟಕ ಸ್ತ್ರೀ ಸಮಾಜ ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
- ನರಸಿಂಹನ್ ಕೆ.ಆರ್. ಕುವಳಾಲ (2016). ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೋಲಾರ.